ಗಾದೆ ಸಂಗ್ರಹ. ಪ್ರಸ್ತಾವನೆ ಹೆಂಡಿಯವರೆ ಬರೆದರು. ಉಳಿದ ಒಗಟು ಒಡಪುಗಳಿಗೆ ತಾವು ಬರೆದರಂತ ಕಾಣಿಸ್ತದ. ಆವಾಗ ಒಡಪು ಬರೆಯುವ ಮುಂದ ಬಹಳ ಪ್ರಯತ್ನ ಮಾಡಿ ಛಲೋ ಬರದರು. ಇವತ್ತಿಗೂ ನೀವು ತೆಗೆದು ನೋಡ್ರಿ, ಮೈಸೂರು ವಿಶ್ವವಿದ್ಯಾಲಯದಿಂದ ಬಂದವು ಮತ್ತ ಬೇರೆ ಕಡೆಯಿಂದ ಬಂದ ಪ್ರಸ್ತಾವನೆಗೂ ಲಠ್ಠೆಯವರ ಪ್ರಸ್ತಾವನೆಗೂ ಭಾಳ ವ್ಯತ್ಯಾಸ ಅದ. ಇಲ್ಲೇನು ನಾಲೇಜ್ ಬಂತಲ್ಲ ಸಂಪಾದನೆ ಸಂಗ್ರಹ ಮಾಡೋದ್ರೊಳಗ ಅದನ್ನ ಬರೆದರು. ಮೈಸೂರಿನವರದು ನೋಡ್ರಿ ಅವ್ರೆಲ್ಲ ಇಂಗ್ಲಿಷ್‌ನಲ್ಲಿದ್ದದ್ದು ಓದಿ ಕನ್ನಡದೊಳಗ ಸಾರಾಂಶ ಬರದಾರ. ಹೊಸದೇನೂ ಬರೀಲಿಕ್ಕ ಹೋಗಿಲ್ಲ. ಇವರು ಏನು ಮಾಡಿದರು ಸ್ವಂತನೇ ಸಂಗ್ರಹಕ್ಕೆ ತೊಡಗಿದ್ರಿಂದ ಇಲ್ಲಿ ಇವುದರ ನೇಚರ್‍ರು, ಸ್ಟ್ರಕ್ಚರ್‍ರು ಏನು ಅಂತೆಲ್ಲ ವಿವರವಾಗಿ ಬರೆದರು. ಹಿಂಗಾಗಿ ಆ ವರ್ಷ ಅವರ ಒಡಪುಗಳ ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂತು. ನನಗ ಪಾಠ ಕೇಳೊ ಅವಕಾಶ ಮತ್ತು ಅವರ ಜೊತೆಗೆ ಸಂಗ್ರಹ ಸಂಪಾದನೆಗೆ ತೊಡಗೊ ಅವಕಾಶ ಸಿಕ್ಕಿತ್ತು. ಲಠ್ಠೆ ಮತ್ತ ಹೆಂಡಿ ಅವರ ಒಡನಾಟದಿಂದ ಹೆಚ್ಚು ಲಾಭ ಆಯ್ತು. ಅದೇ ಬೆಳಸಿದ್ದು ನಮಗ. ಎರಡನೇ ವರ್ಷದೊಳಗಂತು ಸಿದ್ಧಾಂತಗಳು ಏನಿದ್ದವು ಜಾನಪದ ಸಿದ್ಧಾಂತಗಳು ಹೆಂಡಿಯವರೆ ಹೇಳ್ತಿದ್ರು. ಹಿಂಗಾಗಿ, ಅನೇಕ ಹುಡುಗರಲ್ಲಿ ಜಾನಪದದ ಆಸಕ್ತಿ ಬೆಳೀಲಿಕ್ಕೆ ಕಾರಣ ಅಂತಂದ್ರ ಈ ವಾತಾವರಣ. ಹೆಂಡಿಯವರು ಮತ್ತು ಲಠ್ಠೆಯವರು ಬೆಳೆಸಿದ ವಾತಾವರಣ ಇದು. ಈ ಫೈನಲ್ ಇಯರ್ ಮುಗಿಲಾಕ ಬಂದಾಗ ಬರಗಾಲ ಚಾಲೂ ಆಗಿತ್ತು. 1971ರಿಂದ ಆರು ವರ್ಷ ಬರಗಾಲ ಇತ್ತು. ಬರಗಾಲ ವಿರುದ್ಧ ಯುವಕರು ಎನ್ನುವ ಸರಕಾರವೇ ಸಾಹಿತ್ಯಕ್ಕ ಸಂಬಂಧಪಟ್ಟಂತಹ ಒಂದು ಕ್ಯಾಂಪ್ ಇಲ್ಲಿ ಕೊಟ್ಟಿದ್ರು. ನಮ್ಮನ್ನ ಇಲ್ಲೇ ಇರಲಿಕ್ಕೆ ಹೇಳಿದ್ರು. ಯಾಕಂದ್ರ, ಕ್ಯಾಂಪ್ ವ್ಯವಸ್ಥಾ ಮಾಡಲಿಕ್ಕೆ ನಾವು ಬೇಕಾಗಿತ್ತು. ಇಲ್ಲಿ ಅದು ಹತ್ತು ದಿನ ಕ್ಯಾಂಪ. ಎಲ್ಲ ದೊಡ್ಡ ದೊಡ್ಡ ಮಂದಿ ಬಂದಿದ್ರು. ಬರಗಾಲದೊಳಗ ನಡೆದ ಸಾಹಿತ್ಯದ ಕ್ಯಾಂಪು ನಮಗ ಉಳಿಸ್ತು.

ಕ್ಯಾಂಪ್ ಮುಗಿಯದರೊಳಗೇನೆ ಇವರೇನು ಯು.ಜಿ.ಸಿ ಪ್ರಾಜೆಕ್ಟ್ ಹಾಕಿದ್ರಲ್ಲ ಅದು ಸ್ಯಾಂಕ್ಷನ್ ಆಗಿದ್ದು ಲೇಟರ್ ಬಂತು. ಹೆಂಡಿಯವರಿಗೆ ಒಳ್ಳೆ ಖುಷಿ ಆಯ್ತು. ಲಠ್ಠೆಯವರು ಜೊತಿ ಮಾತಾಡ್ಕಂಡ್ರು ಅಂತ ಕಾಣಿಸ್ತದ. ಅವರು ಬಂದು ನಮಗೆಲ್ಲ ನೀವು ಹೋಗಬ್ಯಾಡ್ರಿ, ನಿಮಗ ವಿಭಾಗದೊಳಗ ಟೆಂಪರರಿ ನೌಕರಿ ಕೊಡ್ತೇವು ಇಲ್ಲೆ ಇದ್ದು ಸಂಗ್ರಹ ಮಾಡ್ಕೋತಾ ಇರುವಂತ್ರಿ ಅಂದ್ರು. ದೊಡ್ಡ ಸಮಸ್ಯೆ ಬಗೆಹರಿದಂಗ ಆಯ್ತು. ಈ ಪ್ರಾಜೆಕ್ಟ್ ಏನಿದೆ ಈ ಭಾಗದೊಳಗ ಹೆಚ್ಚೂ ಕಡಿಮೆ ಉತ್ತರ ಕರ್ನಾಟಕದೊಳಗ ವ್ಯಾಪಕ ಪ್ರಭಾವ ಬೀರಿತು. ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಹಾಡು ಕಥೆಗಳ ಸಂಗ್ರಹ ಸಂಪಾದನೆ ಪ್ರಕಟಣಾ ಯೋಜನೆ ಅದು.

◆ **ಅವಾಗಿನಿಂದ ಸಂಗ್ರಹ, ಸಂಪಾದನೆ ಮತ್ತು ಅಧ್ಯಯನದ ಬಗ್ಗೆ ನಿಮಗೆ ಆಸಕ್ತಿ ಬಂತು. ಅಂದ್ರ ನೀವು 70–80ರ ದಶಕದಲ್ಲಿ ಜನಪದ ಸಾಹಿತ್ಯ ಸಂಗ್ರಹ, ಅಧ್ಯಯನಕ್ಕೆ ತೊಡಗಿದಿರಿ. ಈ ಸಂಗ್ರಹ, ಅಧ್ಯಯನದ ಹಿಂದೆ ಆರಂಭದಲ್ಲಿ ನಿಮ್ಮೊಳಗೆ ಯಾವ ಕಲ್ಪನೆಗಳಿದ್ದವು? ಯಾಕಂದ್ರ, ಅದಾಗಲೇ ಜನಪದ ಅಧ್ಯಯನ ಒಂದು ಮಾರ್ಗವನ್ನು ಕ್ರಮಿಸಿ ಬಂದಿತ್ತು.**

ನಾನು ಪಿಎಚ್.ಡಿ. ಮಾಡುವಾಗ 'ಕಲಬುರಗಿ ಜಿಲ್ಲೆಯ ಜನಪದ ಕತೆಗಳ ಆಶಯ ಮತ್ತು ಮಾದರಿಗಳು' ಅನ್ನೊ ವಿಷಯ ಕೊಟ್ರು. ನನಗೆ ಆಶಯ ಮತ್ತು ಮಾದರಿಗಳ ಕಲ್ಪನೆಯೇ ಇರಲಿಲ್ಲ. ಅದಕ್ಕೆ ಸಂಬಂಧಪಟ್ಟ ಪುಸ್ತಕಗಳು ಲೈಬ್ರರಿಯಲ್ಲೂ ಇರಲಿಲ್ಲ. ಆಮೇಲೆ ಇದಕ್ಕ ಸಂಬಂಧಪಟ್ಟಿದ್ದು ಓದ್ತಾ ಹೋದೆ. ಶಾಸ್ತ್ರೀಯ ವಿಷಯ ಕೊಟ್ರಲ್ಲ ಆಶಯ ಮತ್ತು ಮಾದರಿ ಅಂತ. ಇವೆರಡು ಕಥೆಗಳ ಸ್ಟ್ರಕ್ಚರ್‌ಗಳಿಗೆ ಸಂಬಂಧಪಟ್ಟಿದ್ದು.

ಕಥಿ ಓದಬೇಕು, ಮೋಟಿಫ್ ಗುರುತು ಮಾಡಬೇಕು. ಕಥಿ ಯಾವ ವರ್ಗಕ್ಕ ಸೇರತದ, ಯಾವ